ಔರಾದ್ ತಾಲ್ಲೂಕಿನಲ್ಲಿ ಅಗ್ನಿಶಾಮಕ ದಳ ಕಛೇರಿ.

3012(3762)

ಶ್ರೀ ಗುಂಡಪ್ಪ ವಕೀಲ್(ಔರಾದ್): ಮಾನ್ಯ ಗೃಹ ಸಚಿವರು ಈ ಕಳಕಂಡ ಪ್ರಶ್ನೆಗಳಿಗೆ ದಯಪಟ್ಟು ಉತ್ತರಿಸುವರೆ?

ಅ) ಔರಾದ್ ತಾಲ್ಲೂಕಿನ ಎ.ಪಿ.ಎಂ.ಸಿ. ಪ್ರಾಂಗಣದಲ್ಲಿ ಷೆಡ್ ಹಾಗೂ ಕಛೇರಿಗಾಗಿ ಕಟ್ಟಡ ನಿರ್ಮಾಣವಾಗಿ 2 ವರ್ಷವಾದರೂ ಇನ್ನು ಅಗ್ನಿಶಾಮಕ ವಾಹನ ಹಾಗೂ ಸಿಬ್ಬಂದಿ ವ್ಯವಸ್ಥೆ ಆಗಿಲ್ಲದಿರುವ ಸಂಗತಿ ಸರ್ಕಾರಕ್ಕೆ ತಿಳಿದಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು):

ಅ ಮತ್ತು ಆ) 1996ನೇ ಸಾಲಿನಲ್ಲಿ ಔರಾದ ಪಟ್ಟಣದಲ್ಲಿ ಅಗ್ನಿಶಾಮಕ ಠಾಣೆ ಮಂಜೂರಾಗಿದೆ. ಈ ಅಗ್ನಿಶಾಮಕ ಠಾಣೆಗೆ ಒಂದು ಅಗ್ನಿಶಾಮಕ ವಾಹನವನ್ನು ನಿಗದಿಪಡಿಸಲಾಗಿದೆ. ಬೇಕಾಗಿರುವ ಸಿಬ್ಬಂದಿಯವರನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ದೇವಾಲಯಗಳ ಜೀರ್ಣೋದ್ಧಾರಕ್ಕೆ ಬಿಡುಗಡೆ ಮಾಡಿದ ಹಣ.

3014(3636)

ಶ್ರೀ ಗುರುಪಾದಗೌಡ ಸಂಗನಗೌಡ ಪಾಟೀಲ್(ರೋಣ): ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕಳಕಂಡ ಪ್ರಶ್ನೆಗಳಿಗೆ ದಯಪಟ್ಟು ಉತ್ತರಿಸುವರೆ?

1. ಮುಜರಾಯಿ ಇಲಾಖೆಯಿಂದ ಕಳೆದ 3 ವರ್ಷಗಳಿಂದ ದೇವಾಲಯಗಳ ಜೀರ್ಣೋದ್ಧಾರಕ್ಕೆ ಬಿಡುಗಡೆ ಮಾಡಿದ ಒಟ್ಟು ಅನುದಾನವೆಷ್ಟು? (ಅನುದಾನದ ಪಟ್ಟರ ತಾಲ್ಲೂಕುವಾರು ನೀಡುವುದು)

2. ರೋಣ ತಾಲ್ಲೂಕಿಗೆ ಬಿಡುಗಡೆ ಮಾಡಿದ ಅನುದಾನವೆಷ್ಟು?

3. ಆರಾಧನಾ ಯೋಜನೆಯಡಿ ಕಳೆದ 3 ವರ್ಷಗಳಿಂದ ಬಿಡುಗಡೆ ಮಾಡಿದ ಒಟ್ಟು ಅನುದಾನವೆಷ್ಟು? (ತಾಲ್ಲೂಕುವಾರು ಪಟ್ಟರ ನೀಡುವುದು)